

## ಕಳೆದ ಸಂಚಿಕೆಯಲ್ಲಿ

ನಾಗಪ್ಪ ಕೆಲಸದಲ್ಲಿ ಬಹಳ ಚುರುಕು. ಬೆಳಿಗ್ಗೆ ಎಲ್ಲರೂ ಏಳೋದಕ್ಕೆ ಮೊದಲೇ ಎದ್ದು ನೀರು ಸೇದಿ ಹಾಕೋನು. ನಾಗಪ್ಪನ ಕೈಚಳಕಕ್ಕೆ ಮಾರುಹೋದವರು ಅನೇಕ. ಹುರಿಗಟ್ಟಿರುವ ತೋಳುಗಳಿಂದ ಆತ ತುಂಬಿದ ಕೊಡವನ್ನು ಎಳೆಯುವುದು, ಒಂದೇ ಕೈಯಿಂದ ಅದನ್ನು ಎತ್ತಿ ಹೆಗಲ ಮೇಲೆ ಇಟ್ಟುಕೊಳ್ಳುವುದು ಮಲ್ಲೂರಿನ ಒಂದು ಅವಿಸ್ಮರಣೀಯ ನೋಟವಾಗಿದ್ದಿತು. ಮಾಯಕ್ಕ ಒಳ್ಳೆಯ ಕೆಲಸಗಾರ್ತಿ ಎನ್ನುವುದನ್ನು ಅವಳ ಪಕ್ಕಾ ವೈರಿಯೂ ಒಪ್ಪುತ್ತಾನೆ. ಎಂತಹ ಅತಿವೃಷ್ಟಿ, ಅನಾವೃಷ್ಟಿಯಲ್ಲಿಯೂ ಆಕೆ ಕೆಲಸ ಮಾಡದೇ ಬಿಡುವುದಿಲ್ಲ. 'ನಾ ರಾಜಕೀಯಕ್ಕ ಬಂದಿರೋದೇ ಜನಗಳ ಸೇವೆ ಮಾಡಲು, ಊರಿನ ಸುಧಾರಣೆ ಮಾಡಲು. ಸುಧಾರಣೆ ಅಂದ್ರ ನೂರಕ್ಕೆ ನೂರು ಅಲ್ಲ. ನನ್ನ ಕೈಯಿಂದ ಎಷ್ಟು ಆಕ್ಕೈತೋ ಅಷ್ಟು ಮಾತ್ರ' ಎಂದು ವಿನಮ್ರವಾಗಿ ಹೇಳುತ್ತಾಳೆ ಮಾಯಕ್ಕ.

ಎನ್ನುವ ಹಾಗೆ ಅಂಗೈಯಲ್ಲಿಟ್ಟುಕೊಂಡು ಕಂಡವರಿಗೆಲ್ಲ ತೋರಿಸುವುದು ಕೆಲವರಿಗೆ ಆಟವಾಗಿದ್ದಿತು. 'ಆವಾಗಿನ ಸಿಮೆಂಟ್ ನೋಡ್ರೀ, ಆವಾಗಿನ ಉಕ್ಕ ನೋಡ್ರಿ, ಮಿನಿ ವಿಧಾನಸೌಧ ಕಟ್ಟಲಿಕ್ಕೆ ಇಂತಹ ಖಡಿ ಹಾಕಬೇಕಿತ್ತು, ನೂರಾರು ವರ್ಷ ಆದ್ರೂ ಜಗ್ಗಲಾರದಂಥ ಇಂತಹ ಸಿಮೆಂಟ್ ಬಳಸಬೇಕಿತ್ತು, ಬುನಾದಿಗೆ ನಮ್ಮ ಸೀಮೆಯ ಕರಿ ಉಸುಕೇ ಬಳಸಬೇಕಿತ್ತು...' ಆ ಮಾತುಗಳನ್ನು ಆಲಿಸಲು ಅನೇಕರು ಮುಕುರಿರುತ್ತಿದ್ದರು. ಕಾಲೇಜು ಹುಡುಗರಂತೂ ತಮ್ಮ ಬಸ್‌ಪಾಸ್‌ಗಳ ಹಿಂಬದಿಯಲ್ಲಿ ಅವುಗಳನ್ನು ಬರೆದುಕೊಂಡು ಗದಗದಲ್ಲಿ ಪ್ರಿಂಟಾಗುವ ಡಿಗ್ರಿ ಗೈಡ್‌ಗಳಲ್ಲಿ ಇತಿಹಾಸದ ಈ ವಿಚಾರಗಳು ಇವೆಯೋ ಇಲ್ಲವೋ ಎಂದು ಪರೀಕ್ಷಿಸಲೆಂದು ತಮ್ಮ ಬುದ್ಧಿಮತ್ತೆಯನ್ನು ಹರಿತಗೊಳಿಸುತ್ತಿದ್ದರು.

ನಿಲ್ದಾಣದ ಯಾವ ಮೂಲೆಯನ್ನೆ ನೋಡಲಿ, ಕಣ್ಣುಗಳು ಯಾವ ದಿಕ್ಕಿಗಾದರೂ ತಿರುಗಲಿ ಗಿಜಿಗಿಡುವ ಜನಜಂಗುಳಿ ಹುಯ್ ಹುಯ್ ಎನ್ನುತ್ತ, ಆಗಾಗ ಅಸೌಖ್ಯದಿಂದ ನರಳುತ್ತ, ನಿಂತಲ್ಲಿ ನಿಲ್ಲದೆ, ಕುಂತಲ್ಲಿ ಕುಳಿತುಕೊಳ್ಳದೆ ಒಂದೆ ಸಮನೆ ನಲುಗುತ್ತಿದ್ದರು. ಪ್ರಪಂಚದ ಎಲ್ಲ ಕಷ್ಟ ನಷ್ಟಗಳನ್ನು ತಾವೇ ಹೊತ್ತಿದ್ದೇವೆ ಎನ್ನುವಂತೆ ಗಂಡಸರು ತಮ್ಮ ಹಣೆಯ ಸುಕ್ಕುಗಳನ್ನು ಮತ್ತಷ್ಟು ಆಳವಾಗಿಸಿಕೊಂಡು ಅತ್ತ ಇತ್ತ ನೋಡುತ್ತಿದ್ದರು. ಸೋತ ಮುಖಗಳಿಂದ ಜಿನುಗುತ್ತಿದ್ದ ಬೆವರು ಅವರ ಹರಿದ ಕಾಲರುಗಳನ್ನು ತೋಯಿಸಿ ಪತಗುಡುತ್ತಿತ್ತು. ಅವರ ಕಳವಳ ಒಂದು ಸಂಗತಿಯಿಂದ ಮತ್ತೊಂದು ಸಂಗತಿಗೆ ಹರಿಯುತ್ತಿತ್ತು. ತಮ್ಮ ಗಂಡಸರು ಈ ರೀತಿ ಚಿಂತೆ ಮಾಡುತ್ತ ಕುಳಿತರೆ ಮನೆ ನಡೆಯುವುದೆಂತು ಎಂದು ಹೆಂಗಸರಿಗೆ ಮತ್ತಷ್ಟು ಹೆದರಿಕೆಯಾಗುವುದು. ಅವರ ಗೆಲುವಾಗಲೆಂದು ಇವರೂ ಮುಖದಲ್ಲಿ ಸ್ವಲ್ಪ ನಗೆ ಮೂಡಿಸಲು ಯತ್ನಿಸುವರು. ಹೆಗಲ ವಸ್ತ್ರದಿಂದಲೊ, ಉಟ್ಟ ಧೋತರದ ಚುಂಗಿನಿಂದಲೊ ಮುಖ, ಕೊರಳು ಹಾಗೂ ಬಗಲ ಬೆವರನ್ನು ಒರೆಸಿಕೊಂಡರೆ ತಮ್ಮ ಗಂಡಂದಿರ ಮುಖ ಅರಳುವುದನ್ನೆ ಕಾಯುತ್ತಿರುವ ಹೆಂಗಸರು 'ಉಸ್ಸೆಪಾ, ಶಿವ ಶಿವಾ, ಈ ಬಿಸಿಲ ಎಂದ್ ತಗ್ಗತೈತೊ, ಮಳಿನೀರು ಎಂದ ಹರಿತೈತೊ' ಎನ್ನುತ್ತ ಸೀರೆ ಸೆರಗಿನಿಂದ ದೊಡ್ಡದಾಗಿ ಗಾಳಿ ಹಾಕಿಕೊಳ್ಳುತ್ತಿದ್ದರು. ಜೋರಾಗಿ ಬೀಸಿಕೊಂಡರೆ ಮಾಸಿದ ಸೆರಗು ಹರಿದೀತೆಂದು ಹೆದರಿ, ಮದುವೆ ಮುಂಜಿವೆಸಂತೆಸೋಬಾನಕ್ಕೆ ಉಟ್ಟುಕೊಳ್ಳಲು ಇರುವುದು ಚೆಂದಚೆಂದದ ಕಸೂತಿ ಹಾಕಿರುವ ಈ ಹಸಿರು ಸೀರೆ ಒಂದೇ ಎಂದು ನೆನಪಿಗೆ ಬಂದು ಗಂಡನ ಮೀಸೆಗಡ್ಡದ ಮೇಲೆ ಕೈಯಾಡಿಸಿದಂತೆ ಬಣ್ಣ ಮಾಸುತ್ತಿದ್ದ ಕಸೂತಿಯ ಮೇಲೆ ಕೈಯಾಡಿಸುವರು.

ಬಸ್‌ಸ್ಟ್ಯಾಂಡಿನ ತಾರಕ್ಕೇರುವ ಗದ್ದಲದಲ್ಲಿ ಒಬ್ಬರಿಗೊಬ್ಬರು ಏನು ಹೇಳುತ್ತಿದ್ದಾರೆಂದಾಗಲಿ ಅಥವಾ ಮತ್ತೊಬ್ಬರಿಂದ ಅವರು ಏನನ್ನು ಕೇಳುತ್ತಿದ್ದಾರೆಂದಾಗಲಿ ಅಷ್ಟು ಸಲೀಸಾಗಿ ಗೊತ್ತಾಗುವಂತಿರಲಿಲ್ಲ. ಎರಡು ಮೂರು ವರ್ಷದ ಕೂಸುಗಳಿಂದ ಹಿಡಿದು ಹೈಸ್ಕೂಲು ಪಾಸಾಗಿ ಇದೇ ಹೊಂಗಲದಲ್ಲಿ ಕಾಲೇಜಿಗೆ ಹೋಗುತ್ತಿರುವ, ಫೇಲಾಗಿ ಇದೇ ಹೊಂಗಲದಲ್ಲಿ ರಿಕಾಮಿ ತಿರುಗುತ್ತಿರುವ ಹುಡುಗರ ತನಕ ನೂರಾರು ಹುಡುಗರು ಮಿಕಿಮಿಕಿ ನೋಡುತ್ತ ಅಡ್ಡಾಡುತ್ತಿದ್ದರು. ಕೆಲವು ಸಣ್ಣ ಹುಡುಗರಂತೂ ಬೈಲಹೊಂಗಲನ್ನು ಕಾಣುವ ಆಸೆಯಿಂದ ಅಪ್ಪ ಅಮ್ಮಕಾಕಾಚಿಗವ್ವದೊಡ್ಡಪ್ಪ ದೊಡ್ಡವ್ವ ಎಂದು ರಾಗಗಳನ್ನು ಹಚ್ಚುತ್ತ ದೊಡ್ಡವರ ಬೆನ್ನುಹತ್ತಿದ್ದರು. ಆ ಮನೆಯ ಹುಡುಗ ಹೊಂಟಾನೆಂದು ಈ ಮನೆಯ ಹುಡುಗನೂ ಅಷ್ಟು ದೂರದ ಹಳ್ಳಿಯಿಂದ ಬರುತ್ತಾರೆಂದ ಮೇಲೆ ಬೈಲಹೊಂಗಲಕ್ಕೆ ಇಷ್ಟು ಹತ್ತಿರವಿರುವ ಮಲ್ಲೂರಿನಿಂದ ತಾವೇಕೆ ಹೋಗಬಾರದೆಂದು ಕೆಲವರು ಇಂದಿನ ಬಜಾರದ ಮೋಜಿನಲ್ಲಿ ಸೇರ್ಪಡೆಯಾಗಿದ್ದರು.

ತಾವು ಎಷ್ಟೇ ಬೇಡಿಕೊಂಡರೂ ಹೊಂಗಲದ ಹೊಸ ಟಾಕೀಸ್‌ನಲ್ಲಿ ಹೊಸದಾಗಿ ಬಂದಿದ್ದ ಸಿನಿಮಾ ತೋರಿಸುವುದು ದೂರವೆ ಉಳಿಯಿತು, ಯಕಶ್ಚಿತ್ ಬಸ್‌ಸ್ಟ್ಯಾಂಡ್ ಎದುರಿಗಿರುವ ಡಬ್ಬಿ ಅಂಗಡಿಯ ಮೆಣಸಿನಕಾಯಿ ಭಜಿಯನ್ನಾದರೂ ಕೊಡಿಸಿಯಾರು ಎಂದು ಮಕ್ಕಳು ಆಸೆಗಣ್ಣುಗಳಿಂದ ಹಿರಿಯರತ್ತ ನೋಡಿಯೇ ನೋಡುತ್ತಿದ್ದವು. ಬಸ್ಸು ಬೇಗನೆ ಬರದಿರಲಿ, ತಾವು ತಮ್ಮ ಹಳ್ಳಿಗೆ ಬೇಗ ಹೋಗದಿರಲಿ ಎಂದು ಒಳಗಿಂದೊಳಗೆ ಪ್ರಾರ್ಥಿಸುತ್ತಿದ್ದವು.

ಕೆಲವು ಮಕ್ಕಳಂತು ಸೆಕೆಯ ತಾಪಕ್ಕೊ ಹೊಟ್ಟೆ ಹಸಿದಿರುವುದಕ್ಕೊ ಮೇಲ್ಛಾವಣಿ ಹಾರಿಹೋಗುವಂತೆ ಚೀರುತ್ತಿದ್ದವು. ಮೊದಲೆ ವೀರಭದ್ರನ ಅವತಾರ ತಾಳಿದ್ದ ಗಂಡಸರಿಗೆ ಅಳುವ ಮಕ್ಕಳ ಧ್ವನಿಯೊಂದು ಇಲ್ಲದ ಉಸಾಬರಿಯೆನಿಸಿ ಅವರ ಕಿವಿಯಲ್ಲಿ ಸೀಸ ಹೊಯ್ದಂತಾಗುತ್ತಿತ್ತು. ಇದುವರೆಗೂ ಹೇಗೊ ಹೇಗೋ ತಡೆದಿದ್ದ ಅವರ ಅಸಹನೆಯ ಕಟ್ಟೆ ಒಮ್ಮೆಲೆ ಒಡೆದು ಹುಡುಗರತ್ತ ಕೆಂಗಣ್ಣು ಬಿಡುವುದಲ್ಲದೆ ತಾಯಂದಿರ ಸೆರಗಿಗೆ ಸುತ್ತಿಕೊಳ್ಳುತ್ತಿದ್ದ ಅವರನ್ನು ಈ ಕಡೆ ಜಗ್ಗಿ ಅವರ ಕಪಾಳಕ್ಕೆ ಬಾರು ಮೂಡುವಂತೆ ಹೊಡೆಯುತ್ತಿದ್ದರು. ಬೆನ್ನಿಗೆ ಗುಮಟೆ ಏಳುವಂತೆ ಗುದ್ದಿ ತಮ್ಮೊಳಗಿನ ಸಂಕಟವನ್ನು ಆರಿಸಿಕೊಳ್ಳುತ್ತಿದ್ದರು. ಇದರಿಂದ ಕೆರಳಿದ ಹೆಂಗಸರು ಮಕ್ಕಳನ್ನು ಅಕ್ಟೋಪಸ್ ಅಪ್ಪಂದಿರಿಂದ ಬಿಡಿಸಿಕೊಳ್ಳಲು ತಮ್ಮ ಗಂಡಂದಿರ ಮೇಲೆ ನಾನಾ ರೀತಿಯ ಬೈಗುಳಗಳನ್ನು ಪ್ರಯೋಗಿಸದೆ ಬಿಡುತ್ತಿರಲಿಲ್ಲ:

'ಬುದ್ಧಿ ಎಲ್ಲಿಟ್ಟಿದೀ, ಕೂಸು ಸತ್ತಗಿತ್ತೀತು ಅನ್ನೋ ಅರುವು ಬ್ಯಾಡ ನಿನಗ? ನಿನ್ನ ಕೈಲೆ ಬ್ಯಾರೆ ಏನೂ ನೀಗದಿದ್ರೂ ಮಕ್ಕಳನ್ನ ಹೊಡೆಯೋದು ಮಾತ್ರ ಲಗೂ ಮಾಡತಿದೀ ನೋಡು.' ಗಂಡಂದಿರೆಡೆಗೆ ಕಣ್ಣಿಂದಲೆ ಬೆಂಕಿ ಚೆಲ್ಲಿ, ಹಿಗ್ಗಿದ ಮೂಗಿನಿಂದ ಹೀಗಳೆದಂತೆ ಮಾಡಿ, ದನಕರುಗಳ ಮೂಗುದಾರ ಎಳೆದಂತೆ ಎಳೆಯ ಕಂದಮ್ಮಗಳನ್ನು ತಮ್ಮೆಡೆಗೆ ಎಳೆದುಕೊಂಡು ಅವುಗಳ ಕಣ್ಣೊರೆಸುವರು, ತಾವೂ ಕಣ್ಣೊರೆಸಿಕೊಳ್ಳುವರು. ಅನಿರೀಕ್ಷಿತ ಹೊಡೆತಗಳಿಂದ ಕೆಲವು ಮಕ್ಕಳು ಬಳಲಿ ಬಿದ್ದರೆ ಇನ್ನೂ ಕೆಲವು ಹುಡುಗರು ತಮ್ಮನ್ನು ಕೊಂದರೂ ಸರಿ ತಾವು ರೋದಿಸುವುದನ್ನು ನಿಲ್ಲಿಸಲಾರೆವು ಎನ್ನುವ ಇಚ್ಛಾಶಕ್ತಿಯೊಡನೆ ನಿರಂತರ ನಡೆದೆ ಇದ್ದ ಬಸ್ಸಿನ ಹಾರ್ನ್ ಸದ್ದಿನೊಡನೆ ಸ್ಪರ್ಧೆಗಿಳಿದರು. ಇನ್ನು ಅವುಗಳ ಅಳು ನಿಲ್ಲಿಸುವ ದಾರಿಗಾಣದೆ ಹೆಂಗಸರು ಸಂತೆಯ ಚೀಲದಲಿದ್ದ ಪಾರ್ಲೆ ಬಿಸ್ಕೀಟಿನ ಪಾಕೇಟು ಒಡೆದು ಅದರಲ್ಲಿ ಒಂದನ್ನು ಅವರ ಬಾಯಿಗೆ ತುರುಕುತ್ತ, ತಾವೂ ಒಂದನ್ನು ಮುರಿದು ತಿನ್ನುತ್ತ ಹುಡುಗರ ರೋದನೆಗೆ ಕಡಿವಾಣ ಹಾಕಲು ಯತ್ನಿಸುವರು. ಕೆಲವು ಆಸೆಗಣ್ಣಿನ ಗಂಡಸರು ಕೂಸುಗಳಿದ್ದ ಹೆಂಗಸರ ಸೆರಗಿನತ್ತ ಆಗಾಗ ದೃಷ್ಟಿ ಹರಿಸಲು ಪ್ರಯತ್ನಿಸುತ್ತಿದ್ದರು. ಎಲ್ಲಿ ಹೋದರೂ ಇಂತಹ ಕೆಲವರು ಇದ್ದೇ ಇರುತ್ತಾರೆಂದು ಬೆರಳು ಮುರಿಯುತ್ತ, ಅವರನ್ನು ಕುಳಿತಲ್ಲಿಂದಲೆ ಸುಡುವಂತೆ ನೋಡಿದರು.

ಲಾಲಸೆಯ ಕಣ್ಣುಗಳಿಗೆ ನಂಜಿನ ಪೀಕಜಾಲಿಯ ಮುಳ್ಳನ್ನು ಚುಚ್ಚಿದಂತೆ ಮಾಡಿ, ಪರಸತಿಯರನ್ನು ನೋಡುವವರ ಕೈಕಾಲ ಬೆರಳುಗಳನ್ನು ಮುರಿಯುತ್ತಿರುವವೇನೋ ಎನ್ನುವಂತೆ, ಲಟಲಟನೆ ತಮ್ಮ ಕೈಬೆರಳುಗಳನ್ನು ಮುರಿದರು. ಅವನ ಮುಖಕ್ಕೆ ರಪ್ ಎಂದು ಹೊಡೆಯುವವರಂತೆ ಸೆರಗನ್ನು ಉದ್ದ ಮಾಡಿ ಹೊದ್ದುಕೊಳ್ಳುತ್ತಿದ್ದರು.

(ಸಶೇಷ)